**<u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ</u>**

ಸಿ.ಸಿ.ನಂಬರ್ : 980/2023
ಪಿ.ಡಬ್ಲ್ಯೂ :
ಸಿ.ಡಬ್ಲ್ಯೂ : 3

| | | |
|---|---|---|
| ಸಾಕ್ಷಿದಾರರ ಹೆಸರು | : | ದೇವಿಂದ್ರ ಬಳಬಟ್ಟಿ |
| ತಂದೆಯ ಹೆಸರು | : | ಗೊಲ್ಲಾಳಪ್ಪ |
| ವಯಸ್ಸು | : | 67 |
| ಉದ್ಯೋಗ | : | ವಾಚ್ ಮ್ಯಾನ್ |
| ವಾಸಸ್ಥಳ | : | ಗುಬ್ಬೇವಾಡ |

<u>ಸಾಕ್ಷಿಗೆ ಇಂದು ದಿನಾಂಕಃ 26 .02.2024 ರಂದು ಪ್ರಮಾಣೀಕರಿಸಲಾಯಿತು.</u>

**<u>ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ</u>**

ಪ್ರಸ್ತುತ ಪ್ರಕರಣ ಯಾವುದೇ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ಯಾವುದೇ ಘಟನಾ ಸ್ಥಳದ ಪಂಚನಾಮೆಗೆ ಪಂಚರಾಗಿ ಕರೆದಿಲ್ಲ. ನಾನು ಯಾವುದೇ ಪಂಚನಾಮೆಗೆ ಪಂಚನಾಗಿ ಸಹಿ ಮಾಡಿಲ್ಲ. ಸಾಕ್ಷಿಗೆ ಈಗ ತೋರಿಸಲಾದ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಪಂಚನಾಮೆ ನಿಪಿ1 ಎಂದು ಗುರುತಿಸಲಾಯಿತು, ಸಾಕ್ಷಿ ಸಹಿ ನಿಪಿ1 ಎ ಎಂದು ಗುರುತಿಸಲಾಯಿತು. ಸಾಕ್ಷಿಗೆ ತೋರಿಸಲಾದ ಪೊಟೊ ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ2 ಎಂದು ಗುರುತಿಸಲಾಯಿತು. ನಿಪಿ2 ರಲ್ಲಿ ನಾನು ಇದ್ದೇನೆ ಎಂದರೆ ಸರಿ.

**<u>(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).</u>**

**<u>ಪಾಟೀಸವಾಲುಃ ಎ.ಪಿ.ಪಿ. ರವರಿಂದಃ</u>**

ದಿ.22.05.2022 ರಂದು ಮುಂಜಾನೆ 9.10 ಕ್ಕೆ ನಮ್ಮ ಊರಿನ ಗುರುರಾಜ ಯಮನಪ್ಪ ಕೊಂಡಗುಳಿ ಇವರ ಮನೆ ಹತ್ತಿರ ಮಹಿಂದ್ರಾ ಕಮಾಂಡರ ಜೀಪ್ ಒಬ್ಬ ವ್ಯಕ್ತಿಗೆ ಅಪಘಾತಪಡಿಸಿದ್ದು, ಸದರಿ ಅಪಘಾತಪಡಿಸಿದ ಜೀಪ್ ನಾವು ನೋಡುತ್ತಾ ನಿಂತಿದ್ದೆವು ಎಂದರೆ ಸರಿಯಲ್ಲ. ಆಗ ಜನರು ಜೀಪನಲ್ಲಿ ಮದ್ಯದ ಬಾಕ್ಸಗಳು ಇರುತ್ತವೆ ಎಂದು ಮಾತನಾಡುತ್ತಿದ್ದರು ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ನನ್ನ ಮತ್ತು ಚಾಸಾ-2 ರವರನ್ನು ತಮ್ಮ ಸಿಬ್ಬಂದಿಗಳಾದ ಚಾಸಾ-4 ರಿಂದ 6 ರವರೊಂದಿಗೆ ಸರ್ಕಾರಿ ಜೀಪನಲ್ಲಿ ಘಟನಾ ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ1 ರವರು ನಿಂತಜೀಪನ ಬಗ್ಗೆ ಜನರಿಗೆ ವಿಚಾರಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಜನರು ಸದರಿ ಜೀಪ್ ಬೆಳಿಗ್ಗೆ 6.30 ಕ್ಕೆ ಒಬ್ಬ ವ್ಯಕ್ತಿಗೆ ಅಪಘಾತಪಡಿಸಿದ್ದು ಆತನ ಮನೆಯವರು

ಅವನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ ಮತ್ತು ಸರಿದ ಜೀಪನಲ್ಲಿ ಮದ್ಯದ ಬಾಕ್ಸಗಳು ಇರುತ್ತವೆ ಎಂದು ಚಾಸಾ-1 ರವರಿಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ನನಗೆ ಮತ್ತು ಚಾಸಾ2 ರವರಿಗೆ ಸದರಿ ವಾಹನದಲ್ಲಿರುವ ಮದ್ಯ ಜಪ್ತಮಾಡಲು ಪಂಚರಾಗಿ ಭಾಗಬಹಿಸಲು ನನಗೆ ಮತುತ ಚಾಸಾ2 ರವರಿಗೆ ಕೋರಿರುತ್ತಾರೆ ಎಂದರೆ ಸರಿಯಲ್ಲ.

ಚಾಸಾ-1 ರವರು ಸದರಿ ವಾಹನದ ಒಳಗೆ ಕುಳಿತ ವ್ಯಕ್ತಿ ಹೆಸರು ವಿಳಾಸ ಕೇಳಲಾಗಿ ಆತ ತನ್ನ ಹೆಸರು ಸಿದ್ರಾಮ ತಂದೆ ಬೋಗೇಶ ಮಡಿವಾಳ ಸಾಃ ಜಳಕಿ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆತನಿಗೆ ಸದರಿ ಮದ್ಯದ ಬಾಕ್ಸಗಳನ್ನು ಎಲ್ಲಿಂದ ತಂದಿರುತ್ತಿಯಾ ಎಂದು ಚಾಸಾ-1 ಕೇಳಿರುತ್ತಾರೆ ಎಂದರೆ ಸರಿಯಲ್ಲ. ಆಗ ಆರೋಪಿ ಸದರಿ ಮದ್ಯದ ಬಾಕ್ಸಗಳು ಸಿಂದಗಿ ನಗರದ ಅರ್ಪಿತಾ ವೈನಶಾಪ ಮ್ಯಾನೇಜರ ಹಾಗೂ ಮಾಲೀಕರು ಇವರು ಗುಬ್ಬೇವಾಡ ಹಾಗೂ ಹಡಗಿನಾಳ ಗ್ರಾಮದ ಕಡೆಗೆ ಮಾರಾಟ ಮಾಡಲು ಕಳುಹಿಸಿರುತ್ತಾರೆ ಎಂದು ಹೇಳಿರುತ್ತಾನೆ ಎಂದರೆ ಸರಿಯಲ್ಲ. ಆಗ ಸದರಿಯವನಿಗೆ ಚಾಸಾ-1 ಯಾವುದಾದರು ಸದರಿ ಮದ್ಯ ಮಾರಾಟ ಮಾಡಲು ಪರವಾನಿಗೆ ಅಥವಾ ಸನ್ನದ್ದು ಇದೆಯಾ ಎಂದು ವಿಚಾರಿಸಿದಾಗ ಆತ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಾಹನದ ನಂಬರ ನೋಡಲು ಕೆಎ 27 ಎಂ 0439 ಅಂತ ಇದ್ದು ಸದರಿ ವಾಹನದಲ್ಲಿ ಇದ್ದ ಮದ್ಯವನ್ನು ಪರಿಶೀಲನೆ ಮಾಡಲು ವಾಹನದಲ್ಲಿ 90 ಎಂ ಎಲ್ ಒಟ್ಟು 6 ಬಾಕ್ಸ ಒರಿಜನಲ್ ಚಾಯಿಸ್ ವಿಸಕಿ ಟೆಟ್ರಾ ಪ್ಯಾಕೇಟಗಳು ಪ್ರತಿಯೊಂದು ಬಾಕ್ಸನಲ್ಲಿ 96 ಟೆಟ್ರಾ ಪ್ಯಾಕೇಟ ಇದ್ದವು ಎಂದರೆ ಸರಿಯಲ್ಲ. ಮತ್ತು ಬ್ಯಾಗ ಪೈಪರ ವಿಸಕಿ ಕಂಪೆನಿಯ 180 ಎಂ ಎಲ್ ನ 120 ಟೆಟ್ರಾ ಪ್ಯಾಕೇಟಗಳು ಇದ್ದವು ಎಂದರೆ ಸರಿಯಲ್ಲ. ಇಂಪರಿಯಲ್ ಬ್ಲ್ಯೂ 180 ಎಂ ಎಲ್ ಒಟ್ಟು 42 ಗ್ಲಾಸ ಬಾಟಲುಗಳು ಮತ್ತು ಕಿಂಗ ಪಿ 650 ಎಂ ಎಲ್ 3 ಬಾಕ್ಸ ಪ್ರತಿಬಾಕ್ಸನಲ್ಲಿ 12 ಗ್ಲಾಸನ ಬಾಟಲುಗಳು ಇದ್ದವು ಎಂದರೆ ಸರಿಯಲ್ಲ. ತಕ್ಷಣ ಚಾಸಾ-1 ರವರು ವಾಹನ ಮತ್ತು ಅಕ್ರಮ ಮದ್ಯವನ್ನು ಜಪ್ತಪಡಿಸಿಕೊಂಡು ನಿಪಿ1 ರಂತೆ ಘಟನಾ ಸ್ಥಳದಲ್ಲಿ ಪಂಚನಾಮೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ1 ಅನ್ನು ದಿ.22.5.2022 ರಂದು 9.30 ರಿಂದ 10.30 ರವರೆಗೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿಪರ ವಕೀಲರು ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.